**ಕರ್ನಾಟಕ ಸರ್ಕಾರ**
**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರ ಕಚೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು-560003
Aranya Bhavan, 18th Cross
Malleshwaram, Bengaluru-03
Telephone: 080 23367123
Email:apccfpr@gmail.com

**No.**KFD/HOFF/B9(MSC)/1/2020-PnR-KFD **E – 249302**
ದಿನಾಂಕ: 31-03-2026

# ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016ನ್ನು ಅನುಷ್ಠಾನಗೊಳಿಸುವ ಕುರಿತು ದಿನಾಂಕ:25-03-2026ರಂದು ನಡೆದ ಅಪೆಕ್ಸ್ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಿದಂತೆ, ಸದರಿ ಕಾಯ್ದೆಯಡಿ ರೂಪಿಸಿದ ನಿಯಮಾವಳಿ 2019ರ ನಿಯಮ 25ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ನಿಯಮಾವಳಿಯ ನಿಯಮ 15ರಡಿ 2026-27ನೇ ಸಾಲಿನಲ್ಲಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ, ಅರಣ್ಯ ರಕ್ಷಕ (ಪ್ರಸ್ತುತ ಗಸ್ತು ಅರಣ್ಯ ಪಾಲಕ) ಹಾಗೂ ಅರಣ್ಯ ವೀಕ್ಷಕ ವೃಂದಗಳ ಸಂಬಂಧ ಸಾಮಾನ್ಯ ವರ್ಗಾವಣೆ/ಸ್ಥಳನಿಯುಕ್ತಿ(General Transfers/Postings)ಗಾಗಿ ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

**1. ಸಾಮಾನ್ಯ ವರ್ಗಾವಣೆ/ಸ್ಥಳ ನಿಯುಕ್ತಿಗೆ ಅರ್ಜಿ ಸಲ್ಲಿಸುವ ವಿಧಾನ:-**

**A. ಆನ್‌ಲೈನ್ ಅರ್ಜಿ ಸಲ್ಲಿಸುವ ಅವಧಿ:** ಅರ್ಹ ಅರ್ಜಿದಾರರು ಆನ್‌ಲೈನ್ ಅರ್ಜಿಗಳನ್ನು ಅರಣ್ಯ ಇಲಾಖೆಯ ಜಾಲಾತಾಣ(www.aranya.gov.in)ದಲ್ಲಿರುವ ಮಾನವ ಸಂಪನ್ಮೂಲ ದತ್ತಾಂಶ(HR Database)ರಡಿ ವರ್ಗಾವಣೆ ಸಮಾಲೋಚನೆ ನಿರ್ವಹಣೆ ವ್ಯವಸ್ಥೆ **(TCMS) ತಂತ್ರಾಂಶದ ಮೂಲಕ ದಿನಾಂಕ:15-04-2026ರೊಳಗೆ ಅರ್ಜಿ** ಸಲ್ಲಿಸುವುದು. ಇತರೆ ವಿಧಾನದಲ್ಲಿ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

*[**ಸೂಚನೆ:** ಇಲಾಖೆಯ ಮಾನವ ಸಂಪನ್ಮೂಲ ದತ್ತಾಂಶವನ್ನು ನಿರಂತರ ಇಂದೀಕರಣ ಮಾಡಲಾಗುತ್ತಿದ್ದು, ಪ್ರಸ್ತುತ ಪ್ರಕಟಿಸಿದ ಸಿಬ್ಬಂದಿಗಳ ಪಟ್ಟಿಗಳನ್ನು ತಂತ್ರಾಂಶದಲ್ಲಿ ನಿಯಂತ್ರಣಾಧಿಕಾರಿಗಳು ದಾಖಲಿಸಿರುವ ವಿವರಗಳಂತೆ ಹಾಗೂ ವಿವಿಧ ವೃತ್ತ ಪ್ರಾಧಿಕಾರಗಳಿಂದ ಸ್ವೀಕರಿಸಿದ ಪರಿಷ್ಕರಣೆಯಂತೆ ತಯಾರಿಸಲಾಗಿದ್ದು, **ಕಾಲಕಾಲಕ್ಕೆ ಪರಿಷ್ಕರಣೆಗೆ ಒಳಪಟ್ಟಿರುತ್ತದೆ. ಪರಿಷ್ಕರಣೆಗಳ ನಂತರ ನಿಯಮಾನುಸಾರ ಅರ್ಹ ಸಿಬ್ಬಂದಿಗಳನ್ನು ಮಾತ್ರ ಸಮಾಲೋಚನೆಗೆ ಪರಿಗಣಿಸಲಾಗುವುದು**.]*

**B.** ಅರ್ಜಿ ಸಲ್ಲಿಸಲು ಅರಣ್ಯಾಧಿಕಾರಿಗಳು ಸದರಿ ತಂತ್ರಾಂಶದಲ್ಲಿ ತಮ್ಮ ಕೆ.ಜಿ.ಐ.ಡಿ. ಮೂಲಕ Log in ಆಗಬಹುದಾಗಿದ್ದು, ಇಲಾಖೆಯ ವತಿಯಿಂದ ಒದಗಿಸಲಾಗಿರುವ ಹುದ್ದೆ ಆಧಾರಿತ ಮೊಬೈಲ್ ಸಂಖ್ಯೆ ಅಥವಾ ತಂತ್ರಾಂಶದಲ್ಲಿ ಲಭ್ಯವಿರುವ ಸಿಬ್ಬಂದಿಗಳ ವೈಯಕ್ತಿಕ ಮೊಬೈಲ್ ಸಂಖ್ಯೆಗಳಿಗೆ ರವಾನಿಸಲಾಗುವ O.T.P ಕಡ್ಡಾಯವಾಗಿರುತ್ತದೆ.

**C.** ಅರ್ಜಿದಾರರು ಆನ್ ಲೈನ್ ಅರ್ಜಿಯನ್ನು ಸಲ್ಲಿಸುವಾಗ ವರ್ಗಾವಣೆ/ಸ್ಥಳ ನಿಯುಕ್ತಿಗೆ ಪ್ರಸ್ತುತ ಲಭ್ಯವಿರುವ/ಖಾಲಿ ಹುದ್ದೆಗಳ ಪೈಕಿ ಆದ್ಯತೆ ಮೇಲೆ ಭರ್ತಿ ಮಾಡಲು ಗುರುತಿಸಿದ ಹುದ್ದೆಗಳ ತಾತ್ಕಾಲಿಕ ಪಟ್ಟಿ**(ಅರಣ್ಯ ಇಲಾಖೆಯ ಎಚ್ ಆರ್ ತಂತ್ರಾಂಶದಲ್ಲಿ ಲಭ್ಯವಿರುವ)**ಯಿಂದ ಆಯ್ಕೆಯನ್ನು ಎಚ್ಚರಿಕೆಯಿಂದ ನಮೂದಿಸುವುದು.

**D.** ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ಯಾವುದೇ ಬದಲಾವಣೆ/ಪರಿಷ್ಕರಣೆ ಮಾಡಲು ಅಥವಾ ಅರ್ಜಿಯನ್ನು ಹಿಂಪಡೆಯಲು ಅವಕಾಶವಿರುವುದಿಲ್ಲ.

**2. 2026-2027ನೇ ಸಾಲಿನ ಸಾಮಾನ್ಯ ವರ್ಗಾವಣೆ ಸಂಬಂಧ ಅಪೆಕ್ಸ್ ಪ್ರಾಧಿಕಾರವು ನಿಗದಿಪಡಿಸಿದ ಮುಖ್ಯ ಅಂಶಗಳು:**

**A. ವರ್ಗಾವಣೆ ಪ್ರಮಾಣ(Scale of transfer)ದಂತೆ ವರ್ಗಾವಣೆಗೆ ಅರ್ಹತೆ:** ಕಾಯ್ದೆಗೆ ಒಳಪಟ್ಟಿರುವ ಸಿಬ್ಬಂದಿಗಳ ಹೆಚ್ಚು ಸಂಖ್ಯೆ ಹಾಗೂ ಆಡಳಿತ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸಂಬಂಧಿಸಿದ ವೃಂದದಲ್ಲಿ ಆಯಾ ವೃತ್ತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆಯ **ಶೇಕಡ 25**ರಷ್ಟರ ವರ್ಗಾವಣೆ ಪ್ರಮಾಣದಲ್ಲಿ ಒಳಗೊಂಡಿರುವ ಸೇವಾವಧಿ (Tenure):

i. **ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ವೃಂದ:** ಮೂರು (3) ವರ್ಷ ಅಥವಾ ಹೆಚ್ಚು.

ii. **ಅರಣ್ಯ ರಕ್ಷಕ (ಪ್ರಸ್ತುತ ಗಸ್ತು ಅರಣ್ಯ ಪಾಲಕ) ವೃಂದ:** ನಾಲ್ಕು (4) ವರ್ಷ ಅಥವಾ ಹೆಚ್ಚು.

iii. **ಅರಣ್ಯ ವೀಕ್ಷಕ ವೃಂದ:** ಏಳು (7) ವರ್ಷ ಅಥವಾ ಹೆಚ್ಚು.

*[**ಸೂಚನೆ:** ಈ ಮೇಲಿನ ವರ್ಗಾವಣೆ ಪ್ರಮಾಣಕ್ಕೆ ಒಳಪಟ್ಟಿರುವ ಕನಿಷ್ಟ ಸೇವಾ ಅವಧಿಯು ಸಾಮಾನ್ಯ ಪ್ರಕರಣಗಳಿಗೆ ಸಂಬಂಧಿಸಿದ್ದು, ಕಾಯ್ದೆಯಲ್ಲಿ ವರ್ಗಾವಣೆ ಸಂಬಂಧ ವಿಶೇಷ ಪ್ರಕರಣಗಳಿಗೆ ನಿಗದಿಪಡಿಸಿದ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.]*

**B. ಅಂತರ ವೃತ್ತ ವರ್ಗಾವಣೆ ಅರ್ಜಿಗಳು:**

i. ನಿಗದಿತ ವೃಂದಗಳಿಗೆ ಆಯಾ ವೃತ್ತವು ಜೇಷ್ಟತಾ ಘಟಕ(Unit of Seniority)ವಾಗಿದ್ದು, ಅಂತರವೃತ್ತ ವರ್ಗಾವಣೆಗಳನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಟತೆ) ನಿಯಮಾವಳಿ 1957ರ ನಿಯಮ 6ರ ಮೊದಲನೇ ಪರಂತುಕದನುಸಾರ ಕೋರಿಕೆ ವರ್ಗಾವಣೆ ಎಂದು ಪರಿಗಣಿಸಿ, ಅಂತರವೃತ್ತ ವರ್ಗಾವಣೆ ಪ್ರಮಾಣವನ್ನು ಈ ಕೆಳಗಿನಂತೆ ನಿಯಂತ್ರಿಸಲಾಗುವುದು.

(a) ಆಯಾ ವೃತ್ತದಲ್ಲಿ ಅಪೆಕ್ಸ್ ಪ್ರಾಧಿಕಾರವು ಪ್ರಸ್ತುತ ಸಾಲಿಗೆ ನಿಗದಿಪಡಿಸಿದ ವರ್ಗಾವಣೆಯ ಪ್ರಮಾಣಕ್ಕೆ ಒಳಪಟ್ಟಿರುವ ಸಂಬಂಧಿಸಿದ ವೃಂದದಲ್ಲಿನ ಸಿಬ್ಬಂದಿಗಳ ಒಟ್ಟು ಸಂಖ್ಯೆಯ ಗರಿಷ್ಠ 2% ರಷ್ಟು.

(b) ಸಂಬಂಧಿಸಿದ ವೃಂದದಲ್ಲಿನ ನೇರ ನೇಮಕಾತಿ ಕೋಟಾದ ಹುದ್ದೆಗಳ (ಸಂಖ್ಯೆಯಂತೆ ನಿಯಂತ್ರಿತ) ಎದುರು ನೇರ ನೇಮಕಾತಿ ಸಿಬ್ಬಂದಿಗಳು ಹಾಗೂ ಅದೇ ರೀತಿ ಬಡ್ತಿ ಕೋಟಾದ ಹುದ್ದೆಗಳ (ಸಂಖ್ಯೆಯಂತೆ ನಿಯಂತ್ರಿತ) ಎದುರು ಬಡ್ತಿ ಕೋಟಾದ ಸಿಬ್ಬಂದಿಗಳು.

(c) ಕಲ್ಯಾಣ-ಕರ್ನಾಟಕ ಪ್ರದೇಶದ ಹೊರಗಡೆ ಕಾರ್ಯ ನಿರ್ವಹಿಸುತ್ತಿರುವ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದಲ್ಲಿನ ಈಗಾಗಲೇ ಅಧಿಸೂಚಿತ ಸಿಬ್ಬಂದಿಗಳು ಹಾಗೂ ನೇರ ನೇಮಕಾತಿ ಅಧಿಸೂಚನೆ ಮೂಲಕ ಕಲ್ಯಾಣ-ಕರ್ನಾಟಕ ಸ್ಥಳೀಯ ವೃಂದದ ಹುದ್ದೆಗಳಿಗೆ ನೇರ ನೇಮಕಾತಿ ಹೊಂದಿದ ಸಿಬ್ಬಂದಿಗಳ ಅಂತರವೃತ್ತ ವರ್ಗಾವಣೆ ಅರ್ಜಿಗಳನ್ನು ಕಲ್ಯಾಣ-ಕರ್ನಾಟಕ ಪ್ರದೇಶದ ವ್ಯಾಪ್ತಿಯ ವೃತ್ತಗಳಿಗೆ ಈ ಮೇಲಿನ ಕ್ರಮ ಸಂಖ್ಯೆ (a) & (b) ರಲ್ಲಿನ ನಿಬಂಧನೆಗಳಿಗೆ ಒಳಪಟ್ಟು ಪರಿಗಣಿಸಲಾಗುವುದು.

(d) ಬೆಳಗಾವಿ ವೃತ್ತದಲ್ಲಿ ಗಸ್ತು ಅರಣ್ಯ ಪಾಲಕ ವೃಂದದಿಂದ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ವೃಂದಕ್ಕೆ ಬಡ್ತಿಯನ್ನು ನೀಡುವಾಗ ರೋಸ್ಟರ್ ಪಾಯಿಂಟ್‌ಗಳನ್ನು ಅಳವಡಿಸುವಲ್ಲಿ ಆಗಿರುವ ಗೊಂದಲವು ಕರ್ನಾಟಕ ಬೋವಿ ಅಭಿವೃದ್ದಿ ನಿಗಮ, ಬೆಂಗಳೂರು ಇವರಲ್ಲಿ ಪರಿಶೀಲನೆ

ಹಂತದಲ್ಲಿರುವುದರಿಂದ ಅಂತರವೃತ್ತ ವರ್ಗಾವಣೆಯಲ್ಲಿ ಬೇರೆ ವೃತ್ತದಿಂದ ಬೆಳಗಾವಿ ವೃತ್ತಕ್ಕೆ ಪ್ರಸ್ತುತ ನಡೆಯುವ ಸಾಮಾನ್ಯ ವರ್ಗಾವಣೆಯಲ್ಲಿ ಯಾವುದೇ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ನೌಕರರಿಗೆ ವರ್ಗಾವಣೆ ನೀಡಲಾಗುವುದಿಲ್ಲ.

(e) ಬೆಂಗಳೂರು ವೃತ್ತದಲ್ಲಿ ಮುಂಬಡ್ತಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರ ಸಂಖ್ಯೆಯು ಲಭ್ಯವಿರುವ ಮುಂಬಡ್ತಿ ರಿಕ್ತ ಸ್ಥಾನಗಳಿಂದ ಹೆಚ್ಚುವರಿಯಾಗಿರುವುದರಿಂದ ಅಂತರವೃತ್ತ ವರ್ಗಾವಣೆಯಲ್ಲಿ ಬೇರೆ ವೃತ್ತದಿಂದ ಬೆಂಗಳೂರು ವೃತ್ತಕ್ಕೆ ಪ್ರಸ್ತುತ ನಡೆಯುವ ಸಾಮಾನ್ಯ ವರ್ಗಾವಣೆಯಲ್ಲಿ ಯಾವುದೇ ಮುಂಬಡ್ತಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ ನೌಕರರಿಗೆ ವರ್ಗಾವಣೆ ನೀಡಲಾಗುವುದಿಲ್ಲ. ಮುಂದುವರೆದು, ಕೇಂದ್ರ ಕಚೇರಿಯ ಅರಣ್ಯ ಭವನದ ಹುದ್ದೆಗಳಿಗೆ ಮಾತ್ರ ನೇರ ನೇಮಕಾತಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು ಅರ್ಜಿ ಸಲ್ಲಿಸಿದ್ದಲ್ಲಿ ನಿಯಮಾನುಸಾರ ವರ್ಗಾವಣೆ ನೀಡಲಾಗುವುದು.

(f) ಕಲಬುರಗಿ ಮತ್ತು ಬಳ್ಳಾರಿ ವೃತ್ತದಲ್ಲಿ ಕಲ್ಯಾಣ ಕರ್ನಾಟಕೇತರ (Non-KK) ವೃಂದ ಬಲ (ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ/ಅರಣ್ಯ ರಕ್ಷಕ 20% ಮತ್ತು ಅರಣ್ಯ ವೀಕ್ಷಕ 15%) ಕ್ಕಿಂತ ಹೆಚ್ಚುವರಿ ನೌಕರರು ಸದರಿ ವೃತ್ತಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಈ ಮೇಲ್ಕಂಡ ವೃತ್ತಗಳಿಗೆ ಪ್ರಸ್ತುತ ನಡೆಯುವ ಸಾಮಾನ್ಯ ವರ್ಗಾವಣೆಯಲ್ಲಿ ಯಾವುದೇ ಕಲ್ಯಾಣ ಕರ್ನಾಟಕೇತರ (Non-KK) ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರ/ ಅರಣ್ಯ ರಕ್ಷಕ /ಅರಣ್ಯ ವೀಕ್ಷಕ ನೌಕರರಿಗೆ ವರ್ಗಾವಣೆ ನೀಡಲಾಗುವುದಿಲ್ಲ.

**C. ನಿರ್ಣಾಯಕ ಹುದ್ದೆ(Critical posts)ಗಳಿಗೆ ವರ್ಗಾವಣೆ/ಸ್ಥಳನಿಯುಕ್ತಿಗೆ ಅರ್ಹತೆ:**

(a) ನಿಯಮಗಳಲ್ಲಿ ನಿಗಧಿಪಡಿಸಿದ ಮಾನದಂಡಗಳ ಆಧಾರದ ಮೇಲೆ ನಿಯಂತ್ರಣಾಧಿಕಾರಿಗಳು ಆಯಾ ಸಿಬ್ಬಂದಿಗೆ ನೀಡಿರುವ **ಕಾರ್ಯ ನಿರ್ವಹಣೆ ಮಾಪಕ ಅಂಕ (Performance Rating):** ಆರು (6) ಅಥವಾ ಹೆಚ್ಚು

(b) ಆರು (6) ಅಥವಾ ಹೆಚ್ಚು ಅಂಕಗಳನ್ನು ಪಡೆದ ನೌಕರರನ್ನು ಅಂತರ ರಾಜ್ಯ ಗಡಿ, ಅರಣ್ಯ ಸಂಚಾರಿ ದಳ, ಚೆಕ್ ಪೋಸ್ಟ್, ಟೌನ್ ಡ್ಯೂಟಿ, ಜಾಗೃತ ಹುದ್ದೆಗಳಿಗೆ ಆದ್ಯತೆ ಮೇಲೆ ಪರಿಗಣಿಸಲಾಗುವುದು.

**D. 31.03.2027ರಂದು ಅಥವಾ ಅದಕ್ಕೂ ಮೊದಲು ನಿವೃತ್ತಿ ಹೊಂದಲಿರುವ ನೌಕರರ ಸೇವಾವಧಿಯಲ್ಲಿ ಸಡಿಲಿಕೆ:**

ನಿವೃತ್ತಿ ಅಂಚಿನಲ್ಲಿರುವ ನೌಕರರನ್ನು ವರ್ಗಾವಣೆಗೊಳಿಸಿದ್ದಲ್ಲಿ ಪಿಂಚಣಿ ಬಾಕಿಗಳನ್ನು ಪಾವತಿಸುವಲ್ಲಿ ತೊಂದರೆ ಉಂಟಾಗುವುದನ್ನು ತಪ್ಪಿಸಲು ದಿನಾಂಕ:31.03.2027 ಅಥವಾ ಅದಕ್ಕೂ ಮೊದಲು ನಿವೃತ್ತಿ ಹೊಂದುವ ನೌಕರರನ್ನು ಪ್ರಸ್ತುತ ನಡೆಯುವ ಸಾಮಾನ್ಯ ವರ್ಗಾವಣೆಯಲ್ಲಿ ಅದೇ ಹುದ್ದೆಯಲ್ಲಿ ಮುಂದುವರೆಯಲು ಅಥವಾ ಬೇರೆ ಹುದ್ದೆಗೆ ವರ್ಗಾವಣೆ ಹೊಂದಲು ಐಚ್ಛಿಕ ಅವಕಾಶವನ್ನು ನೀಡಲಾಗಿದೆ.

**E. 2026-27ನೇ ಸಾಲಿನ ಸಾಮಾನ್ಯ ವರ್ಗಾವಣೆ/ಸ್ಥಳನಿಯುಕ್ತಿಗೆ ಒಳಪಡುವ ಸಿಬ್ಬಂದಿಗಳ ವರ್ಗಾವಣೆ ಆದ್ಯತಾ ಕ್ರಮ:**

ಸಮಾಲೋಚನೆ ಸಂಧರ್ಭದಲ್ಲಿ ಯಾವುದೇ ಸಿಬ್ಬಂದಿಗೆ ಅವರು ಹಾಲಿ ನಿಯುಕ್ತರಾಗಿರುವ ಪ್ರವರ್ಗದ ಹುದ್ದೆಗಳ ಹೊರತು ಇತರೆ ಪ್ರವರ್ಗದಲ್ಲಿ ಖಾಲಿ/ ಲಭ್ಯ ಹುದ್ದೆ ಇಲ್ಲದಿದ್ದ ಪಕ್ಷದಲ್ಲಿ ಮಾತ್ರವೇ ಅವರು ಹಾಲಿ ನಿಯುಕ್ತರಾಗಿರುವ ಪ್ರವರ್ಗದ ಹುದ್ದೆಗಳಿಗೆ ನಿಯುಕ್ತಿಗೊಳಿಸಲು ನಿಯಮಾನುಸಾರ ಪರಿಗಣಿಸಲಾಗುವುದು

**3.** ಆಯಾ ವೃಂದದಲ್ಲಿ ವರ್ಗಾವಣೆ/ಸ್ಥಳ ನಿಯುಕ್ತಿಗೆ ಪ್ರಸ್ತುತ ಲಭ್ಯವಿರುವ/ಖಾಲಿ ಹುದ್ದೆಗಳ ಪೈಕಿ ಸಾಮಾನ್ಯ ವರ್ಗಾವಣೆ/ಸ್ಥಳ ನಿಯುಕ್ತಿ ಮೂಲಕ ಆದ್ಯತೆ ಮೇಲೆ ಭರ್ತಿ ಮಾಡಲು ಗುರುತಿಸಿದ ಹುದ್ದೆಗಳ ತಾತ್ಕಾಲಿಕ ಪಟ್ಟಿ (posts to be filled) ವಿವರಗಳನ್ನು ಇಲಾಖೆಯ ಜಾಲಾತಾಣ(www.aranya.gov.in)ದಲ್ಲಿ ಲಭ್ಯಪಡಿಸಲಾಗುವುದು.

*[ಸೂಚನೆ:*

- *ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016 ಮತ್ತು ನಿಯಮಾವಳಿ 2019ರಲ್ಲಿನ ವಿವಿಧ ರೀತಿಯ ನಿಬಂಧನೆಗಳನ್ನು ಪಾಲಿಸಿ, ವರ್ಗಾವಣೆ/ಸ್ಥಳ ನಿಯುಕ್ತಿಗೆ ಪರಿಗಣಿಸಬಹುದಾದ ಹುದ್ದೆಗಳು ಮಾತ್ರ ಆನ್ ಲೈನ್ ಅರ್ಜಿಯಲ್ಲಿ ಆಯ್ಕೆಗೆ ಲಭ್ಯವಿರುತ್ತದೆ.*
- *ಇಲಾಖೆಯ ಮಾನವ ಸಂಪನ್ಮೂಲ ದತ್ತಾಂಶವನ್ನು ನಿರಂತರ ಇಂದೀಕರಣ ಮಾಡಲಾಗುತ್ತಿದ್ದು, ಪ್ರಸ್ತುತ ಲಭ್ಯವಿರುವ/ಖಾಲಿ ಹುದ್ದೆಗಳ ಪೈಕಿ ಸಾಮಾನ್ಯ ವರ್ಗಾವಣೆ/ಸ್ಥಳ ನಿಯುಕ್ತಿ ಮೂಲಕ ಆದ್ಯತೆ ಮೇಲೆ ಭರ್ತಿ ಮಾಡಲು ಗುರುತಿಸಿದ ಹುದ್ದೆಗಳ ತಾತ್ಕಾಲಿಕ ಪಟ್ಟಿಗಳನ್ನು ವಿವಿಧ ವೃತ್ತ ಪ್ರಾಧಿಕಾರಗಳಿಂದ ಸ್ವೀಕರಿಸಿದ ಮಾಹಿತಿಯಂತೆ ತಯಾರಿಸಲಾಗಿದ್ದು,* ***ಕಾಲಕಾಲಕ್ಕೆ ಪರಿಷ್ಕರಣೆಗೆ ಒಳಪಟ್ಟಿರುತ್ತದೆ. ಪರಿಷ್ಕರಣೆಗಳನ್ವಯ ಹುದ್ದೆಗಳನ್ನು ಮಾತ್ರ ಸಮಾಲೋಚನೆಗೆ ಪರಿಗಣಿಸಲಾಗುವುದು.****]*

**4. ಸಮಾಲೋಚನೆ ದಿನಾಂಕ:** 04-05-2026 ರಿಂದ. *(ತಾತ್ಕಾಲಿಕ)*

*[**ಸೂಚನೆ:** ರಾಜ್ಯ ಪ್ರಾಧಿಕಾರ/ ವೃತ್ತ ಪ್ರಾಧಿಕಾರ/ ವಿಭಾಗ ಪ್ರಾಧಿಕಾರದ ಸಮಾಲೋಚನೆ (Counselling) ದಿನಾಂಕ ಮತ್ತು ಸ್ಥಳದ ವಿವರಗಳನ್ನು ಅರಣ್ಯ ಇಲಾಖೆಯ ಜಾಲಾತಾಣ(www.aranya.gov.in)ದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.]*

**5.** ಅರ್ಜಿದಾರರು ಅರ್ಜಿ ಸಲ್ಲಿಸುವ ಮುನ್ನ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016 ಮತ್ತು ನಿಯಮಾವಳಿ 2019 ಅನ್ನು ಜಾಗ್ರುತೆಯಿಂದ ಓದಿಕೊಳ್ಳತಕ್ಕದ್ದು.

**6.** ವರ್ಗಾವಣೆ/ಸ್ಥಳನಿಯುಕ್ತಿಗೆ ಸಂಬಂಧಿಸಿದ ಮಾಹಿತಿಯನ್ನು ಕಾಲಕಾಲಕ್ಕೆ ಅರಣ್ಯ ಇಲಾಖೆಯ ಜಾಲಾತಾಣ(www.aranya.gov.in)ದಲ್ಲಿ ಪ್ರಕಟಿಸಲಾಗುವುದು. ಸಿಬ್ಬಂದಿಗಳು ನಿಯಮಿತವಾಗಿ ಮಾಹಿತಿಯನ್ನು ವೀಕ್ಷಿಸಲು ಸಲಹೆ ನೀಡಿದೆ. ವರ್ಗಾವಣೆ/ಸ್ಥಳನಿಯುಕ್ತಿ ಸಂಬಂಧ ಯಾವುದೇ ಪತ್ರ ವ್ಯವಹಾರ(ಭೌತಿಕ/ಇ-ಮೇಲ್/ಇತರೆ)ವನ್ನು ಪರಿಗಣಿಸಲಾಗುವುದಿಲ್ಲ.

Digitally signed by
MEENAKSHI NEGI
Date: 31-03-2026
14:18:01

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ಹಾಗೂ
**ಅಧ್ಯಕ್ಷರು, ಅಪೆಕ್ಸ್ ಪ್ರಾಧಿಕಾರ**

**ಪ್ರತಿ ಮಾಹಿತಿ /ಹಾಗೂ ಮುಂದಿನ ಕ್ರಮಕ್ಕಾಗಿ** *[ಅರಣ್ಯ ಇಲಾಖಾ ಜಾಲತಾಣದಲ್ಲಿ ಈ ಪ್ರಕಟಣೆಯ ಮೂಲಕ/ಇ-ಮೇಲ್ ಮೂಲಕ/ಕಛೇರಿ ಸೂಚನಾ ಫಲಕಗಳಲ್ಲಿ ಪ್ರಕಟಿಸುವ ಮೂಲಕ]***:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ/ ಅಭಿವೃದ್ಧಿ/ ಅರಣ್ಯ ಸಂರಕ್ಷಣೆ/ EWPRT & CC/ ಕಾಂಪಾ/ ಕಾನೂನು ಕೋಶ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – **ಈ ಅಧಿಸೂಚನೆಯನ್ನು ಇಲಾಖೆಯ ಜಾಲಾತಾಣದಲ್ಲಿ ಕೂಡಲೇ ಪ್ರಕಟಿಸಲು.**
4. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. **ರಾಜ್ಯ ಪ್ರಾಧಿಕಾರಕ್ಕೆ (State Authority)- ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ.**
6. ಎಲ್ಲಾ ವೃತ್ತ ಪ್ರಾಧಿಕಾರಗಳಿಗೆ - **ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ.**
7. ಎಲ್ಲಾ ವಿಭಾಗೀಯ ಪ್ರಾಧಿಕಾರಗಳಿಗೆ- **ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ.**
8. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
9. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು.
10. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು.
11. ಆಡಳಿತ ಅಧಿಕಾರಿ/ಆಡಳಿತ ಸಹಾಯಕರು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
12. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಆಪ್ತ ಸಹಾಯಕರು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
13. ಎಲ್ಲಾ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು/ ಗಸ್ತು ಅರಣ್ಯ ಪಾಲಕರು (ಅರಣ್ಯ ರಕ್ಷಕರು)/ ಅರಣ್ಯ ವೀಕ್ಷಕರಿಗೆ – **ಇಲಾಖೆಯ ಜಾಲಾತಾಣದಲ್ಲಿ ಪ್ರಕಟಿಸುವ ಮೂಲಕ.**
14. ಈ ಕಛೇರಿಯ ಬಿ3, ಬಿ7 ಮತ್ತು ಬಿ9 ಶಾಖೆಗಳಿಗೆ.

**ಪ್ರತಿ:**

ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಆಪ್ತ ಕಾರ್ಯದರ್ಶಿ, ಕೊಠಡಿ ಸಂಖ್ಯೆ: 36 & 37, ನೆಲಮಹಡಿ, ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ಮಾನ್ಯ ಸಚಿವರ ಆದ್ಯ ಗಮನಕ್ಕೆ ತರಲು ಕೋರಿದೆ.